# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ¨AU – 4J<br>Part – IVA | ಬೆಂಗಳೂರು, ಸೋಮವಾರ,19,ಅಕ್ಟೋಬರ್, 2020( ಆಶ್ವಯುಜ, 27, ಶಕವರ್ಷ ೧೯೪2)<br>Bengaluru, MONDAY,19,OCTOBER,2020( Aashwayuja,27, ShakaVarsha 1942) | ನಂ. 473<br>No. 473 |


**DEPARTMENT OF PARLIAMENTARY AFFAIRS AND LEGISLATION SECRETARIAT**

**NOTIFICATION**

**NO: DPAL 34 SHASANA 2020, BENGALURU, DATED:19.10.2020**

The Karnataka Prohibition of Beggary (Amendment) Bill, 2020 ಇದಕ್ಕೆ 2020 ರ ಅಕ್ಟೋಬರ್ ತಿಂಗಳ 19ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2020 ರ ಕರ್ನಾಟಕ ಅಧಿನಿಯಮ ಸಂಖ್ಯೆ :43 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

## KARNATAKA ACT NO. 43 OF 2020

(First Published in the Karnataka Gazette Extra-ordinary on the 19th day of October, 2020)

## THE KARNATAKA PROHIBITION OF BEGGARY (AMENDMENT) ACT, 2020

(Received the assent of Governor on the 19th day of October, 2020)

An Act further to amend the Karnataka Prohibition of Beggary Act, 1975.

Whereas it is expedient to amend the Karnataka Prohibition of Beggary Act, 1975 (Karnataka Act 27 of 1975) for the purposes hereinafter appearing;

Be it enacted by Karnataka State Legislature in the seventy first year of the Republic of India as follows:-

1. **Short title and commencement.-** (1) This Act may be called the Karnataka Prohibition of Beggary (Amendment) Act, 2020.

(2) It shall come into force at once.

2. **Substitution of section 14.-** For section 14 of the Karnataka Prohibition of Beggary Act, 1975 (Karnataka Act 27 of 1975), the following shall be substituted, namely:-

"**14. Medical examination and detention of beggars under certain circumstances.-** (1) Where it appears to the Government that any beggar detained in an institution under any order of a magistrate is suffering from mental illness or any contagious disease, the Government may, by an order setting forth the grounds for the belief that the beggar is suffering from mental illness or any contagious disease, order his removal to a mental health establishment or a government or private hospital or medical institution or other place of safe custody, there to be kept and treated as the Government direct during the term for which he has been ordered to be detained, or if on the expiration of that term, it is certified by a Government Medical Officer that it is necessary for the safety of the beggar or of others that he should be further detained under medical care or treatment, then until he is discharged according to law.

(2) Where it appears to the Government that the beggar has ceased to be of mental illness or is cured of any contagious disease, the Government shall, by an order direct the person having charge of the beggar if still liable to be kept in custody, send him to the institution from which he was removed or if the beggar is no longer liable to be kept in custody, order him to be discharged.

(3) Subject to the provision of sub-section (2), the provisions of section 104 of the Mental Health Care Act, 2017(Central Act 10 of 2017) or the corresponding provision of any other law in force in any area of the State, shall apply to every beggar confined in a mental health establishment or a Government or private hospital or medical institution under sub-section (1) after the expiration of the period for which he was ordered to be detained; and the time during which a beggar is admitted in a mental health establishment or a Government or private hospital or medical institution under that sub-section shall be reckoned as part of the period for which he may be ordered by the magistrate to be detained.

Provided that, where the removal of a beggar due to mental illness or any contagious disease is immediately necessary, it shall be open to the authorities of the institution in which the beggar is detained to apply to a court having jurisdiction under the Mental Health Care Act, 2017 (Central Act 10 of 2017) or under any corresponding law in force in any area of the State for an immediate order of committal to a mental health establishment or a Government or private hospital or medical institution until such time as the orders of the Government can be obtained in the matter."

By Order and in the name of
the Governor of Karnataka,

**(K. DWARAKANATH BABU)**
Secretary to Government
Department of Parliamentary
Affairs and Legislation

## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

## ಅಧಿಸೂಚನೆ

**ಸಂಖ್ಯೆ: ಸಂವ್ಯಶಾಇ 34 ಶಾಸನ 2020, ಬೆಂಗಳೂರು, ದಿನಾಂಕ:19.10.2020**

The Karnataka Prohibition of Beggary (Amendment) Bill, 2020 ಇದಕ್ಕೆ 2020 ರ ಅಕ್ಟೋಬರ್ ತಿಂಗಳ 19ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2020 ರ ಕರ್ನಾಟಕ ಅಧಿನಿಯಮ ಸಂಖ್ಯೆ :43 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

**2020**ರ ಕರ್ನಾಟಕ ಅಧಿನಿಯಮ ಸಂಖ್ಯೆ: **43**
(2020ರ ಅಕ್ಟೋಬರ್ ತಿಂಗಳ ಹತ್ತೊಂಬತ್ತನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

### ಕರ್ನಾಟಕ ಭಿಕ್ಷಾಟನೆ ನಿಷೇಧ (ತಿದ್ದುಪಡಿ) ಅಧಿನಿಯಮ, 2020

(2019ರ ಅಕ್ಟೋಬರ್‌ತಿಂಗಳ ಹತ್ತೊಂಬತ್ತನೇ ದಿನಾಂಕದಂದು ರಾಜ್ಯಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)

ಕರ್ನಾಟಕ ಭಿಕ್ಷಾಟನೆ ನಿಷೇಧ ಅಧಿನಿಯಮ, 1975ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭಿಕ್ಷಾಟನೆ ನಿಷೇಧ ಅಧಿನಿಯಮ, 1975ನ್ನು (1975ರ ಕರ್ನಾಟಕ ಅಧಿನಿಯಮ 27) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು ಎಂದರೆ:-

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಭಿಕ್ಷಾಟನೆ ನಿಷೇಧ (ತಿದ್ದುಪಡಿ) ಅಧಿನಿಯಮ, 2020 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. **14ನೇ ಪ್ರಕರಣದ ಪ್ರತಿಯೋಜನೆ.-** ಕರ್ನಾಟಕ ಭಿಕ್ಷಾಟನೆ ನಿಷೇಧ ಅಧಿನಿಯಮ, 1975ರ (1975ರ ಕರ್ನಾಟಕ ಅಧಿನಿಯಮ 27) 14ನೇ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

**"14. ಕೆಲವು ಸನ್ನಿವೇಶಗಳಲ್ಲಿ ಭಿಕ್ಷುಕರ ವೈದ್ಯಕೀಯ ಪರೀಕ್ಷೆ ಮತ್ತು ಬಂಧನ:-** (1) ಮ್ಯಾಜಿಸ್ಟ್ರೇಟನ ಯಾವುದೇ ಆದೇಶದ ಮೇರೆಗೆ ಸಂಸ್ಥೆಯಲ್ಲಿ ಬಂಧನದಲ್ಲಿಟ್ಟಿರುವ ಯಾವನೇ ಭಿಕ್ಷುಕನು, ಮಾನಸಿಕ ಅಸ್ವಸ್ಥತೆ ಅಥವಾ ಅಂಟುರೋಗದಿಂದ ನರಳುತ್ತಿರುವನೆಂದು ಸರ್ಕಾರಕ್ಕೆ

ಕಂಡುಬಂದಿರುವಲ್ಲಿ, ಸರ್ಕಾರವು ಭಿಕ್ಷುಕನು ಮಾನಸಿಕ ಅಸ್ವಸ್ಥನಾಗಿರುವನೆಂದು ಅಥವಾ ಅಂಟುರೋಗದಿಂದ ನರಳುತ್ತಿರುವನೆಂಬುದಕ್ಕಾಗಿನ ಕಾರಣಗಳನ್ನು ನಿರೂಪಿಸಿ ಆದೇಶದ ಮೂಲಕ ಅವನನ್ನು ಮಾನಸಿಕ ಆರೋಗ್ಯ ಸಂಸ್ಥೆಗೆ ಅಥವಾ ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆಗೆ ಅಥವಾ ವೈದ್ಯಕೀಯ ಸಂಸ್ಥೆಗೆ ಅಥವಾ ಇತರ ಸುರಕ್ಷಿತ ಅಭಿರಕ್ಷೆಯ ಇತರ ಸ್ಥಳಕ್ಕೆ ಅವನನ್ನು ಸ್ಥಳಾಂತರಿಸುವಂತೆ ಮತ್ತು ಅಲ್ಲಿ ಯಾವ ಅವಧಿಗಾಗಿ ಅವನನ್ನು ಬಂಧನದಲ್ಲಿಡಲು ಆದೇಶಿಸಲಾಗಿದೆಯೋ ಅಂಥ ಉಳಿದ ಅವಧಿಯಲ್ಲಿ ಸರ್ಕಾರವು ನಿರ್ದೇಶಿಸುವಂತೆ ಅಥವಾ ಆ ಅವಧಿಯು ಮುಕ್ತಾಯವಾದ ಮೇಲೆ ಭಿಕ್ಷುಕನ ಅಥವಾ ಇತರರ ಸುರಕ್ಷತೆಗಾಗಿ ಅವನನ್ನು ವೈದ್ಯಕೀಯ ರಕ್ಷಣೆಯಲ್ಲಿ ಅಥವಾ ಚಿಕಿತ್ಸೆಯಲ್ಲಿ ಇನ್ನೂ ಬಂಧನದಲ್ಲಿಡುವುದು ಅವಶ್ಯವೆಂದು ಸರ್ಕಾರಿ ವೈದ್ಯಾಧಿಕಾರಿಯು ಪ್ರಮಾಣೀಕರಿಸಿದರೆ ಆಗ ಅವನನ್ನು ಕಾನೂನಿಗನುಸರವಾಗಿ ಬಿಡುಗಡೆ ಮಾಡುವವರೆಗೆ ಅಲ್ಲಿ ಇಟ್ಟುಕೊಂಡಿರಲು ಮತ್ತು ಚಿಕಿತ್ಸೆ ಮಾಡಲು ಆದೇಶಿಸಬಹುದು.

(2) ಭಿಕ್ಷುಕನ ಮಾನಸಿಕ ಅಸ್ವಸ್ಥತೆಯು ಕೊನೆಗೊಂಡಿರುವುದೆಂದು ಅಥವಾ ಅಂಟುರೋಗವು ವಾಸಿಯಾಗಿದೆಯೆಂದು ಸರ್ಕಾರಕ್ಕೆ ಕಂಡುಬಂದಿರುವಲ್ಲಿ, ಸರ್ಕಾರವು ಭಿಕ್ಷುಕನ ವಶವನ್ನು ಹೊಂದಿರುವ ವ್ಯಕ್ತಿಗೆ ಅವನನ್ನು ಅಭಿರಕ್ಷೆಯಲ್ಲಿಡಲು ಇನ್ನೂ ಹೊಣೆಗಾರನಾಗಿದ್ದರೆ, ಅವನನ್ನು ಯಾವ ಸಂಸ್ಥೆಯಿಂದ ಸ್ಥಳಾಂತರಿಸಲಾಯಿತೋ ಆ ಸಂಸ್ಥೆಗೆ ಕಳುಹಿಸಲು ಅಥವಾ ಭಿಕ್ಷುಕನನ್ನು ಇನ್ನೂ ಅಭಿರಕ್ಷೆಯಲ್ಲಿಡಲು ಅವನು ಹೊಣೆಗಾರನಾಗಿದ್ದರೆ, ಅವನನ್ನು ಬಿಡುಗಡೆ ಮಾಡುವಂತೆ ಆದೇಶಿಸಲು ಆದೇಶದ ಮೂಲಕ ನಿರ್ದೇಶಿಸತಕ್ಕದ್ದು.

(3) (2)ನೇ ಉಪಪ್ರಕರಣದ ಉಪಬಂಧಕ್ಕೊಳಪಟ್ಟು ಮಾನಸಿಕ ಆರೋಗ್ಯ ರಕ್ಷಣೆ ಅಧಿನಿಯಮ, 2017ರ (2017ರ ಕೇಂದ್ರ ಅಧಿನಿಯಮ 10) 104ನೇ ಪ್ರಕರಣದ ಉಪಬಂಧಗಳು ಅಥವಾ ರಾಜ್ಯದ ಯಾವುದೇ ಪ್ರದೇಶದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಸಂವಾದಿ ಉಪಬಂಧವು, ಅವನನ್ನು ಬಂಧನದಲ್ಲಿಡಬೇಕೆಂದು ಆದೇಶಿಸಿರುವಂಥ ಅವಧಿಯು ಮುಕ್ತಾಯವಾದ ತರುವಾಯ (1)ನೇ ಉಪಪ್ರಕರಣದ ಮೇರೆಗೆ ಮಾನಸಿಕ ಆರೋಗ್ಯ ಸಂಸ್ಥೆ ಅಥವಾ ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆ ಅಥವಾ ವೈದ್ಯಕೀಯ ಸಂಸ್ಥೆಯಲ್ಲಿ ಬಂಧಿಸಿಟ್ಟಿರುವ ಪ್ರತಿಯೊಬ್ಬ ಭಿಕ್ಷುಕನಿಗೂ ಅನ್ವಯಿಸತಕ್ಕದ್ದು ಮತ್ತು ಆ ಉಪಪ್ರಕರಣದ ಮೇರೆಗೆ ಮಾನಸಿಕ ಆರೋಗ್ಯ ಸಂಸ್ಥೆ ಅಥವಾ ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆ ಅಥವಾ ವೈದ್ಯಕೀಯ ಸಂಸ್ಥೆಯಲ್ಲಿ ಭಿಕ್ಷುಕನನ್ನು ಬಂಧಿಸಿಟ್ಟಿರುವಂಥ ಕಾಲವನ್ನು ಅವನನ್ನು ಬಂಧನದಲ್ಲಿಡಬೇಕೆಂದು ಮ್ಯಾಜಿಸ್ಟ್ರೇಟನು ಆದೇಶ ಮಾಡಬಹುದಾದಂಥ ಅವಧಿಯ ಭಾಗವೆಂದು ಪರಿಗಣಿಸತಕ್ಕದ್ದು:

ಪರಂತು, ಭಿಕ್ಷುಕನ ಮಾನಸಿಕ ಅಸ್ವಸ್ಥತೆ ಅಥವಾ ಯಾವುದೇ ಅಂಟುರೋಗದ ಕಾರಣದಿಂದಾಗಿ ಭಿಕ್ಷುಕನ ಸ್ಥಳಾಂತರಣವು ಕೂಡಲೇ ಅವಶ್ಯವಾಗಿರುವಲ್ಲಿ ಭಿಕ್ಷುಕನನ್ನು ಬಂಧನದಲ್ಲಿಟ್ಟಿರುವಂಥ ಸಂಸ್ಥೆಯ ಪ್ರಾಧಿಕಾರಿಗಳಿಗೆ ಮಾನಸಿಕ ಆರೋಗ್ಯ ರಕ್ಷಣೆ ಅಧಿನಿಯಮ, 2017ರ (2017ರ ಕೇಂದ್ರ ಅಧಿನಿಯಮ 10) ಮೇರೆಗೆ ಅಥವಾ ರಾಜ್ಯದ ಯಾವುದೇ ಪ್ರದೇಶದಲ್ಲಿ ಜಾರಿಯಲ್ಲಿರುವ ಯಾವುದೇ ಸಂವಾದಿ ಕಾನೂನಿನ ಮೇರೆಗೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ನ್ಯಾಯಾಲಯಕ್ಕೆ ಈ ವಿಷಯದಲ್ಲಿ ಸರ್ಕಾರದ ಆದೇಶವನ್ನು ಪಡೆಯಬಹುದಾದಂಥ ಕಾಲದವರೆಗೆ, ಅವನನ್ನು ಮಾನಸಿಕ ಆರೋಗ್ಯ ಸಂಸ್ಥೆಗೆ ಅಥವಾ ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆಗೆ ಅಥವಾ ವೈದ್ಯಕೀಯ ಸಂಸ್ಥೆಗೆ ಒಪ್ಪಿಸಲು ಕೂಡಲೇ ಆದೇಶ ಮಾಡುವುದಕ್ಕಾಗಿ ಅರ್ಜಿಯನ್ನು ಸಲ್ಲಿಸಲು ಅವಕಾಶವಿರತಕ್ಕದ್ದು."

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



The above translation of the Karnataka Prohibition of Beggary (Amendment) Act, 2020 (Karnataka Act 43 of 2020) shall be authoritative text in the Kannada language under section 5-A of the Karnataka Official Language Act, 1963 (Karnataka Act 26 of 1963).

**ವಜುಬಾಯಿ ವಾಲ**
**ಕರ್ನಾಟಕದ ರಾಜ್ಯಪಾಲರು**

ಕರ್ನಾಟಕ ರಾಜ್ಯಪಾಲರ ಆದೇಶಸಾನುಸಾರ
ಮತ್ತು ಅವರ ಹೆಸರಿನಲ್ಲಿ,

(**ಕೆ.ದ್ವಾರಕನಾಥ್ ಬಾಬು**)
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು.

SUNIL GARDE